ಗುಂಯ್ಗುಡುತ್ತಿದ್ದವು.

ಮತ್ತೆ ಬಾಗಿಲು ಕಿಟಕಿಗಳನ್ನು ತೆರೆಯುವ ಹೊತ್ತಿಗೆ ಪೂರ್ತಿ ರಾತ್ರಿಯಾಗಿತ್ತು, ಹೊರಗೆ ಬೀದಿ ದೀಪಗಳು ಹೊತ್ತಿಕೊಂಡಿದ್ದವು. ಲೋಕಿಯನ್ನು ನೋಡಲಿಕ್ಕೂ ಹೊತ್ತಾಯಿತು ಎಂದನಿಸಿ, ಒಳಗೆ ದೀಪ ಹಚ್ಚುವ ಮನಸ್ಸಾಗದೆ ಬೆಚ್ಚಗೆ ಹೊದ್ದು ಮಲಗಿಬಿಟ್ಟ, ಗಾಢವಾದ ನಿದ್ದೆ ಅವನನ್ನು ತಾಯ ಮಡಿಲಿನಂತೆ ತಬ್ಬಿಕೊಂಡಿತು.

* * *

ಆತ್ಮಾರಾಮ ಎದ್ದಾಗ ಬರೇ ನಿದ್ದೆಯಿಂದ ಎದ್ದಂತಿರದೆ ಎದೆಯಿಂದ ದೊಡ್ಡ ಭಾರವೊಂದು ಕಳಚಿ ಹಗುರವಾದಂತೆ, ತೆವಳುತ್ತಿದ್ದ ಹುಳವೊಂದು ರೆಕ್ಕೆಪಡೆದಂತೆ ಹುರುಪುಗೊಂಡಿದ್ದ. ಜಗತ್ತು ಅವನ ಮೇಲಿದ್ದ ಹಿಡಿತವನ್ನು ಕಳೆದುಕೊಂಡಿದೆ ಎನ್ನುವ ಹಾಗೆ ಅವನ ಆ ಸ್ಥಿತಿ ಅವನಿಗೂ ಆಶ್ಚರ್ಯ ತರುವಷ್ಟು ತೀವ್ರವಾಗಿತ್ತು. ಕನ್ನಡಿಯತ್ತ ತಿರುಗಿ ನೋಡಬೇಕೆಂದೂ ಅನ್ನಿಸಲಿಲ್ಲ. ಅವನಿಗೀಗ ಲೋಕಿಯನ್ನು ಕಾಣಲೇಬೇಕಿತ್ತು. ಅದೇ ಕಾರಣಕ್ಕಾಗಿಯೇ ನಂದನ ವನದತ್ತ ಹೊರಟ. ಪರಿಸರ ಇನ್ನೂ ಪೂರ್ತಿಯಾಗಿ ಎದ್ದಿರಲಿಲ್ಲ. ಕಸವನ್ನೆತ್ತುವ ಗಾಡಿಗಳು ಆಗಷ್ಟೇ ಗುಡಿಸಿಹೋಗಿದ್ದರಿಂದ ರಸ್ತೆಗಳಿಗೆ ಹೊಸ ಕಳೆಬಂದಿತ್ತು. ಹಾಲಿನವರು, ಹೂವಿನವರು ರಸ್ತೆಬದಿಯಲ್ಲಿ ತಮ್ಮ ಸರಂಜಾಮುಗಳನ್ನು ಹರಡಿಕೊಳ್ಳುತ್ತಿದ್ದರು.



ಶೆಟ್ಟರು ಆಗಷ್ಟೇ ಹೋಟೆಲು ತೆರೆದು ಲಕ್ಷ್ಮಿವೆಂಕಟರಮಣನ ಫೋಟೊಕ್ಕೆ ದೀಪ ಬೆಳಗಿಸಿ ನಂದನವನವನ್ನು ಆರಂಭಿಸುವ ಹಂತದಲ್ಲಿದ್ದರು. ಲೋಕಿ ಇನ್ನೂ ಬಂದಿರಲಿಲ್ಲ. ಅಷ್ಟು ಮೊದಲು ಆತ್ಮಾರಾಮನನ್ನು ಕಂಡಿದ್ದಕ್ಕೋ, ಅಥವಾ ಅವನ ಹುರುಪಿಗೋ ಏನೋ ಅವರ ಮುಖ ಆಶ್ಚರ್ಯದಿಂದ ತುಂಬಿತ್ತು. ಆತ್ಮಾರಾಮನ ಆಗಮನ ತಮ್ಮ ಗಮನಕ್ಕೂ ಬಂದಿತು ಎನ್ನುವ ಹಾಗೆ 'ಏನು ವಿಶೇಷ' ಎನ್ನುವಂತೆ ಹುಬ್ಬೇರಿಸಿದರು. ಆತ್ಮಾರಾಮ ಅದ್ಯಾವುದನ್ನೂ ಲಕ್ಷಿಸದೆ ಅವರನ್ನೇ ನೋಡುತ್ತ ಗಡಿಬಿಡಿಯಲ್ಲಿಯೇ "ಎಲ್ಲಿ ನಮ್ಮ ಲೋಕಿ?" ಎಂದು ಕೇಳಿದ.

"ಅವಂದು ರಜಾ ಇವತ್ತು. ನಿನ್ನೆನೂ ಬಂದಿರಲಿಲ್ಲ" ಎಂದರೂ, 'ನಿನಗೆ ಅವನೊಡನೆ ಏನು ಕೆಲಸ?' ಅಥವಾ 'ನಾನು ಇಲ್ಲಿ ಬ್ಯುಸಿ ಆಗಿರೋದು ಕಾಣೋದಿಲ್ಲೇನು?' ಎನ್ನುವ ಕಿರಿಕಿರಿ ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು. ಆತ್ಮಾರಾಮನೊಟ್ಟಿಗೆ ಮಾತಾಡಲು ಮನಸ್ಸಿಲ್ಲವೆನ್ನುವ ರೀತಿಯಲ್ಲಿ ಶೆಟ್ಟರು ಅಡುಗೆಕೋಣೆಯೆಡೆಗೆ ಹೋದರು. ಆತ್ಮಾರಾಮ ಲೋಕಿಯ ಮನೆಯಕಡೆ ಹೊರಟ.

ಅವರೆಗೂ ಆತ್ಮಾರಾಮ ರಾತ್ರಿಯಲ್ಲಿ, ಅದೂ ಲೋಕಿಯೂ ಜೊತೆಗಿರುವಾಗ ಹೋಗಿದ್ದ. ಈಗ ಆ ರಸ್ತೆ ಹಗಲಲ್ಲಿ ಬೇರೆಯದ್ದೇ ಆಗಿ, ಎರಡೂ ಬದಿಗಳಲ್ಲಿ ಚಟುವಟಿಕೆಗಳಿಂದ ನಳನಳಿಸುತ್ತಿರುವಂತೆ ಕಂಡಿತು.

ಲೋಕಿಯ ಮನೆಗೆ ಬೀಗ ಹಾಕಿತ್ತು. ಮುಂದಿನ ಬೀದಿಯಲ್ಲಿ ಕ್ರಿಕೆಟ್ ಆಡುತ್ತಿದ್ದ ಮಕ್ಕಳು ಲೋಕಿ ಆಗತಾನೇ ಹೋದ ಎಂದು ಕೂಗಿದವು. ಎರಡು ಮಕ್ಕಳು ತಮ್ಮಷ್ಟಕ್ಕೆ ಸ್ಪರ್ಧೆ ಮಾಡಿ ಸ್ವಲ್ಪ ದೂರದ ತಿರುವಿನವರೆಗೂ ಓಡಿ, ಲೋಕಿ ತಿರುಗಿದ ದಾರಿಯತ್ತ ಬೊಟ್ಟು ಮಾಡಿ ತೋರಿಸಿದರು. ಅವರ ಅವಸರ ನೋಡಿ ತಾನು ಸ್ವಲ್ಪದರಲ್ಲಿಯೇ ತಪ್ಪಿಸಿಕೊಂಡೆ, ಬಹಳ ದೂರ ಹೋಗಿರಲಿಕ್ಕಿಲ್ಲ ಎಂದನಿಸಿ ಆತ್ಮಾರಾಮನೂ ಅದೇ ದಿಕ್ಕಿನಲ್ಲಿ ಮುಂದೆ ಹೋದ. ಸ್ವಲ್ಪ ದೂರದಲ್ಲಿಯೇ ಲೋಕಿ ಹೋಗುತ್ತಿರುವುದು ಕಾಣಿಸಿತು. ಕೂಗಿ ಕರೆಯಬೇಕೆಂದುಕೊಂಡರೂ ಹೋಟೆಲ್ಲಿಗೂ ಹೋಗದೇ ಲೋಕಿ ಹೊರಟಿದ್ದಾದರೂ ಎಲ್ಲಿಗೆ ಎನ್ನುವ ಕುತೂಹಲದಿಂದ ದೂರದಿಂದಲೇ ಹಿಂಬಾಲಿಸಲಾರಂಭಿಸಿದ.

ಲೋಕಿ ಹೋಗುತ್ತಿದ್ದ ರಭಸ ಮತ್ತು ದಿಕ್ಕು ಎರಡೂ ಆತ್ಮಾರಾಮನ ಕುತೂಹಲವನ್ನು ಹೆಚ್ಚೆಹೆಚ್ಚಗೂ ಹೆಚ್ಚಿಸುತ್ತಲೇ ಹೋದವು. ವಸತಿ ಕಾಂಪ್ಲೆಕ್ಸುಗಳು ಹಿಂದೆ ಬಿದ್ದು ಖಾಲಿ ಜಾಗಗಳು, ಗೂಡಂಗಡಿಗಳು, ಮೊದಲುಗೊಂಡವು. ಮತ್ತೆ ತಿರುವಿದ ಲೋಕಿ ಅಲ್ಲಿನ ಗೂಡಂಗಡಿಯ ಹತ್ತಿರ ನಿಂತು ಅಂಗಡಿಯವನ ಹತ್ತಿರ ಮಾತನಾಡಿದ. ಅದೂ ಒಂದೆರಡು ಕ್ಷಣ